ಸಂಪುಟ : 40 ಸಂಚಿಕೆ 124 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 31 ಮೇ 2017 ಬುಧವಾರ POST REG NO . L-2/RNP- 364/TMR/2015-17 ಪುಟಗಳು : 10 ಬೆಲೆ ₹ 2.50

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಕಟಿತ

# ಪ್ರಜಾ ಪ್ರಗತಿ

ತುಮಕೂರು | Tumakuru

ಸಂಪಾದಕರು : ಎಸ್. ನಾಗಣ್ಣ

E-mail : prajapragathi1@gmail.com
Web : prajapragathi.com



ಕೇಂದ್ರ ಸರ್ಕಾರದ ಗೋಹತ್ಯೆ ನಿಷೇಧ ಆದೇಶಕ್ಕೆ ಮದ್ರಾಸ್ ಹೈಕೋರ್ಟ್‌ನಿಂದ ತಡೆಯಾಜ್ಞೆ

ವಿವರ : ಪುಟ 9



ಖ್ಯಾತ ತೆಲುಗು ನಿರ್ದೇಶಕ, ಮಾಜಿ ಕೇಂದ್ರ ಸಚಿವ ದಾಸರಿ ನಾರಾಯಣರಾವ್ ನಿಧನ

ವಿವರ : ಪುಟ 9

ಸಿಇಟಿ ಎಂಜಿನಿಯರಿಂಗ್: ಮಂಗಳೂರಿನ ಎಕ್ಸ್‌ಪರ್ಟ್ ಪಿಯು ಕಾಲೇಜಿನ ಪ್ರತೀಕ್ ಎಸ್ ನಾಯಕ್‌ಗೆ ಪ್ರಥಮ ರ್‍ಯಾಂಕ್

ವಿವರ : ಪುಟ 9



₹55 Discount Per Gram
Gold 916 ₹ 2740/-
Silver ₹ 41200/-
ಸೂರ ಜ್ಯುಯಲರ್ಸ್
Ashoka Road, Tumkur
Ph: 0816 4022274

# ಸಾರ್ವಜನಿಕ ಸೇವಕರಿಗೆ ಧೈರ್ಯ ಮುಖ್ಯ

## ಜಿ.ಎಂ.ಸಣ್ಣಮುದ್ದಯ್ಯ ಅಭಿನಂದನಾ ಸಮಾರಂಭದಲ್ಲಿ ಪಿ.ಮಣಿವಣ್ಣನ್ ನುಡಿ

**ತುಮಕೂರು**

ಭ್ರಷ್ಟಾಚಾರಕ್ಕೆ ಬಲಿಯಾಗದೆ 40 ವರ್ಷಗಳಷ್ಟು ಸುದೀರ್ಘ ಸೇವಾವಧಿಯನ್ನು ಕಳೆದಿರುವುದು ಜಿ.ಎಂ.ಸಣ್ಣಮುದ್ದಯ್ಯನವರ ಬಹುದೊಡ್ಡ ಸಾಧನೆ ಎಂದು ರಾಜ್ಯಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪಿ.ಮಣಿವಣ್ಣನ್ ತಿಳಿಸಿದರು.

ಅವರು ಮಂಗಳವಾರ ಸಂಜೆ ನಗರದ ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ ಗ್ರೇಡ್-2 ತಹಸೀಲ್ದಾರ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರೂ ಆದ ಜಿ.ಎಂ. ಸಣ್ಣಮುದ್ದಯ್ಯನವರ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಒಳ್ಳೆಯ ಸರ್ಕಾರವೆಂದರೆ ಕಲ್ಲು ಎಸೆಯುವವರಿಗೆ, ಭ್ರಷ್ಟಾಚಾರಿಗಳಿಗೆ, ಸುಳ್ಳು ಹೇಳುವವರಿಗೆ ಭಯ ಇರುವ ಜೊತೆಗೆ ಪ್ರಾಮಾಣಿಕರಿಗೆ ರಕ್ಷೆ ಇರಬೇಕು. ಸಾರ್ವಜನಿಕ ಸೇವಕರಿಗೆ ಧೈರ್ಯ ಬಹಳ ಮುಖ್ಯವೆಂದು ಮಣಿವಣ್ಣನ್ ತಿಳಿಸಿದರು.

ಮುಖ್ಯ ಅತಿಥಿಯಾಗಿದ್ದ ಜಿಲ್ಲಾಧಿಕಾರಿ ಕೆ.ಪಿ.ಮೋಹನ್‌ರಾಜ್ ಮಾತನಾಡುತ್ತಾ ಸಣ್ಣಮುದ್ದಯ್ಯ ಸರ್ಕಾರಿ ಸೇವಕರಿಗೆ ಮಾದರಿ. ಬಹುತೇಕ ಯಾವುದೇ ಸಮಾರಂಭದಲ್ಲಿ ಅರ್ಧಭಾಗ, ಕಾಲುಭಾಗ ಮಾತ್ರ ತುಂಬಿರುತ್ತಿದ್ದ ಕಲಾಕ್ಷೇತ್ರ ಇಂದು ಕಿಕ್ಕಿರಿದು ತುಂಬಿದ್ದು ಒಳಗೆ, ಹೊರಗೆ ಜನತೆ ನಿಂತುಕಾರ್ಯಕ್ರಮ ವೀಕ್ಷಿಸುತ್ತಿರುವುದು ಸಣ್ಣಮುದ್ದಯ್ಯನವರ ಸೇವೆಗೆ ಸಾಕ್ಷಿ ಎಂದರು.



ಪ್ರಜಾಪ್ರಗತಿ ಸಂಪಾದಕರಾದ ಎಸ್. ನಾಗಣ್ಣನವರು ಮಾತನಾಡುತ್ತಾ ಸತ್ಯ ನಾರಾಯಣ, ಕೆಂಪೇಗೌಡರ ಕಾಲದಲ್ಲಿ ಜಿಲ್ಲಾ ಸರ್ಕಾರಿ ನೌಕರರ ಕಚೇರಿಯಲ್ಲಿ ಬರೀ ಸಿಗರೇಟ್ ಹೊಗೆ ಮತ್ತು ಇಸ್ಪೀಟ್ ಆಟ ನಡೆಯುತ್ತಿದ್ದು, ಎಷ್ಟೋ ಸಾರಿ ಪೊಲೀಸ್ ರೈಡ್ ಕೂಡ ಆಗಿದೆ. ಸಣ್ಣಮುದ್ದಯ್ಯ ಅಧ್ಯಕ್ಷರಾದ ತಕ್ಷಣ ಮಾಡಿದ ಮೊಟ್ಟಮೊದಲ ಕೆಲಸವೆಂದರೆ ಈ ಅಕ್ರಮ ಚಟುವಟಿಕೆಯನ್ನು ನಿಲ್ಲಿಸಿದ್ದು. ನೌಕರರ ವೇತನದ ದೇಣಿಗೆಯನ್ನು ಇವರ ಶುದ್ಧವಾದ ಕೈ ಉಪಯುಕ್ತ ಕಾರ್ಯಕ್ಕೆ ಒಟ್ಟು ಮಾಡುವಲ್ಲಿ ಯಶಸ್ವಿಯಾಗಿದ್ದನ್ನು ಸ್ಮರಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಸಣ್ಣಮುದ್ದಯ್ಯನವರು, ಕಂದಾಯ ಇಲಾಖೆಯಲ್ಲಿ ಉದ್ಯೋಗಕ್ಕೆ ಸೇರಿದಾಗ ನನ್ನ ತಾಯಿ ಖಾತೆ ಮಾಡಿ »» 6ನೇ ಪುಟಕ್ಕೆ

# ಎತ್ತಿನ ಹೊಳೆ ಯೋಜನಾ ಸಂತ್ರಸ್ತರ ಪುನರ್‌ವಸತಿಗೆ ಸಮಿತಿ ರಚನೆ

## ತುಮಕೂರು ಜಿಲ್ಲಾಧಿಕಾರಿ ಅಧ್ಯಕ್ಷತೆಯ ಸಮಿತಿ

**ಬೆಂಗಳೂರು**

ಎತ್ತಿನ ಹೊಳೆ ಸಮಗ್ರ ಕುಡಿಯುವ ನೀರಿನ ಯೋಜನಾ ಸಂತ್ರಸ್ತರಿಗೆ ಪುನರ್‌ವಸತಿ ಕಲ್ಪಿಸಲು ಕಂದಾಯ ಇಲಾಖೆಯು ತುಮಕೂರು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಯೋಜನಾ ಸಮಿತಿಯನ್ನು ರಚಿಸಿದೆ.

ಎತ್ತಿನಹೊಳೆ ಯೋಜನೆಗೆ ಸಂಬಂಧಿಸಿದಂತೆ ನೀರು ಸಂಗ್ರಹಿಸಲು ಉದ್ದೇಶಿಸಿರುವ ಬೈರಗೊಂಡಲು ಜಲಾಶಯ ನಿರ್ಮಾಣದಿಂದ ಮುಳುಗಡೆ ಯಾಗುವ ಗ್ರಾಮಗಳ ಸಂತ್ರಸ್ತರಿಗೆ ಪುನರ್‌ವಸತಿ ಸೌಲಭ್ಯಗಳನ್ನು ಕಲ್ಪಿಸಲು ಸಮಿತಿ ರಚಿಸಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಸಹ ಅಧ್ಯಕ್ಷರಾಗಿದ್ದು, ಯೋಜನಾ ವ್ಯಾಪ್ತಿಯ ಸಂಸದರು, ಶಾಸಕರು ಒಳಗೊಂಡಂತೆ 14 ಮಂದಿ ಸದಸ್ಯರನ್ನು ಈ ಸಮಿತಿ ಒಳಗೊಂಡಿದೆ.

ಸಮಿತಿ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸಂತ್ರಸ್ತರಿಗೆ ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣದ ನಿಯಮಗಳ ವಿಧಾನಗಳನ್ನು ಅನುಸರಿಸಿ ಕಾರ್ಯ ನಿರ್ವಹಿಸಬೇಕಾಗಿದೆ.

ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಯೋಜನಾ ಸಂತ್ರಸ್ತರಿಗೆ ಪರಿಹಾರ ಕಲ್ಪಿಸಲು ತಕ್ಷಣದಿಂದ ಜಾರಿಗೆ ಬರುವಂತೆ ಈ ಸಮಿತಿ ರಚಿಸಿ ಆದೇಶ ಹೊರಡಿಸಲಾಗಿದೆ.

ಜಲಾಶಯ ನಿರ್ಮಾಣದಿಂದ 27 ಗ್ರಾಮಗಳಲ್ಲಿನ ಒಟ್ಟು 5.360 ಎಕರೆಯಷ್ಟು ಜಮೀನನ್ನು ಭೂ ಸ್ವಾಧೀನ ಪಡಿಸಿಕೊಳ್ಳಬೇಕಾಗಿದೆ. ಕೊರಟಗೆರೆ ತಾಲ್ಲೂಕಿಗೆ ಸಂಬಂಧಿಸಿದ 16 ಗ್ರಾಮಗಳ ಪೈಕಿ 5 ಜನ ವಸತಿಗ್ರಾಮಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆಯದೊಡ್ಡಬಳ್ಳಾಪುರ ತಾಲ್ಲೂಕಿನ 11 ಗ್ರಾಮಗಳ ಪೈಕಿ 2 ಜನವಸತಿ ಗ್ರಾಮಗಳು ಪೂರ್ಣವಾಗಿ ಮುಳುಗಡೆಯಾಗುತ್ತವೆ.

ಒಟ್ಟಾರೆ ಮುಳುಗಡೆಯಾಗುವ 7ಜನವಸತಿ ಗ್ರಾಮಗಳ ಸಂತ್ರಸ್ತರಿಗೆ ಪುನರ್ ವಸತಿ ಮತ್ತು ನಿರ್ಮಾಣ ಕಾರ್ಯವನ್ನು ಭೂ ಸ್ವಾಧೀನ ಕಾಯ್ದೆ ಷೆಡ್ಯೂಲ್ 2 ಮತ್ತು 3ರ ಪ್ರಕಾರ ಅನುಷ್ಠಾನಗೊಳಿಸಬೇಕಾಗುತ್ತದೆ.

# ನೈರುತ್ಯ ಮುಂಗಾರು ರಾಜ್ಯಕ್ಕೆ ಪ್ರವೇಶ

**ಬೆಂಗಳೂರು**

ನೈಋತ್ಯ ಮುಂಗಾರು ದೇಶದ ಕೇರಳ ಹಾಗೂ ಈಶಾನ್ಯ ರಾಜ್ಯಗಳನ್ನು ಪ್ರವೇಶಿಸಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ಕೇರಳದಲ್ಲಿ ಮುಂಗಾರು ಮಳೆ ಮೊನ್ನೆಯಿಂದಲೇ ಆರಂಭವಾಗಿದ್ದು, ಆ ರಾಜ್ಯದೆಲ್ಲೆಡೆ ವ್ಯಾಪಿಸುವ ಸಾಧ್ಯತೆ ಇದೆ. ಕೇರಳದ ಕರಾವಳಿ ಹಾಗೂ ಲಕ್ಷ ದ್ವೀಪದಲ್ಲಿ ಭಾರಿ ವೇಗದ ಗಾಳಿ ಬೀಸುತ್ತಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಈ ಮಧ್ಯೆ ರಾಜ್ಯದ ಕರಾವಳಿಯ ಬಹುತೇಕ ಕಡೆ ಮತ್ತು ಉತ್ತರ ಒಳನಾಡಿನ ಅಲ್ಲಲ್ಲಿ ಮಳೆಯಾಗಿದೆ. ಕೋಟಾ, ಆಗುಂಬೆಯಲ್ಲಿ 5 ಸೆಂಟಿಮೀಟರ್ ಮಳೆಯಾಗಿದೆ. ಮೂಡಬಿದಿರೆ, ಕಾರ್ಕಳ, ಶಿರಾಲಿ, ಮಣ್ಕಿಗಳಲ್ಲಿ ತಲಾ 3, ಪನ್ನಂಬೂರು, ಬೆಳ್ತಂಗಡಿ, ಸಿದ್ದಾಪುರ, ಗೇರುಸೊಪ್ಪ, ಭಾಗಮಂಡಲ, ಶೃಂಗೇರಿಯಲ್ಲಿ ತಲಾ 2, ಮಂಗಳೂರು, ಧರ್ಮಸ್ಥಳ, ಪುತ್ತೂರು, ನಾಪೋಕ್ಲು, ತಾಳಗುಪ್ಪದಲ್ಲಿ ತಲಾ 1 ಸೆಂಟಿಮೀಟರ್ ಮಳೆಯಾಗಿದೆ.

ರಾಯಚೂರಿನಲ್ಲಿ ಅತ್ಯಧಿಕ ತಾಪಮಾನ 40 ಡಿಗ್ರಿ ಸೆಲ್ಷಿಯಸ್ ದಾಖಲಾಗಿದೆ. ಕರಾವಳಿಯ ಬಹುತೇಕ ಭಾಗಗಳಲ್ಲಿ ಹಾಗೂ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ನಿರೀಕ್ಷೆ ಇದೆ. ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳಲ್ಲಿ ಹಾಗೂ ಬೆಳಗಾವಿ, ಹಾವೇರಿ, ಧಾರವಾಡ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ನಿರೀಕ್ಷೆ ಇದೆ. ಉತ್ತರ ಒಳನಾಡಿನಲ್ಲಿ ಒಣಹವೆ ಮುಂದುವರಿಯಲಿದೆ.

ಕರಾವಳಿ ಭಾಗದಲ್ಲಿ ಮುಂದಿನ 24 ಗಂಟೆಗಳಲ್ಲಿ ವಾಯುವ್ಯದಿಂದ ಪಶ್ಚಿಮ ದಿಕ್ಕಿನೆಡೆಗೆ ಗಂಟೆಗೆ 45 ರಿಂದ 55 ಕಿಲೋಮೀಟರ್ ವೇಗದಲ್ಲಿ ಗಾಳಿ ಬೀಸಲಿದೆ.

# ಕತ್ತು ಕತ್ತರಿಸಿ ಪತ್ನಿ ಕೊಲೆ ಪತಿಗೆ ಮರಣ ದಂಡನೆ

**ಮಧುಗಿರಿ**

ಅನೈತಿಕ ಸಂಬಂಧ ಹೊಂದಿದ್ದಾಳೆಂದು ಭಾವಿಸಿ ಚೂರಿಯಿಂದ ಪತ್ನಿಯ ಕತ್ತು ಕತ್ತರಿಸಿ ಕೊಲೆಮಾಡಿದ್ದ ಪತಿಗೆ ನಾಲ್ಕನೇ ಅಧಿಕ ಸತ್ರ ನ್ಯಾಯಾಲಯದ ನ್ಯಾಯಾಧೀಶೆ ಬಿ.ಎನ್. ಲಾವಣ್ಯ ಲತಾ ಮರಣ ದಂಡನೆ ಹಾಗೂ 10 ಸಾವಿರ ದಂಡ ವಿಧಿಸಿ ತೀರ್ಪು ನೀಡಿದ್ದಾರೆ.

ಪಾವಗಡ ತಾಲ್ಲೂಕಿನ ತಿರುಮಣಿ ಪೊಲೀಸ್ ಠಾಣಾ ವ್ಯಾಪ್ತಿಯ ನಾಗಲಮಡಿಕೆ ಸಮೀಪವಿರುವ ವಳ್ಳೂರು ಗ್ರಾಮದಲ್ಲಿ 2015 ಅಕ್ಟೋಬರ್ 15 ರಂದು ಮೃತ ಲಕ್ಷ್ಮೀದೇವಿಯು ತನ್ನ ಅಕ್ಕನ ಮನೆ ಯಲ್ಲಿದ್ದಾಗ ಆಂಧ್ರ ಮೂಲದ ಮದ್ದಲಚೆರವು ಗ್ರಾಮದ ಪತಿ ನಂಜಪ್ಪ ತಾಯಿ ಲಕ್ಷ್ಮೀದೇವಿಯು ಮಗಳಾದ ನಂದಿನಿಗೆ ಬೆಳಗಿನ ಸಮಯದಲ್ಲಿ ತಲೆ ಬಾಚುತ್ತಿದ್ದಾಗ ಏಕಾ-ಏಕಿ ಮನೆಗೆ ಬಂದು ಪತ್ನಿ ಜತೆ ಜಗಳವಾಡಿ ಆಕೆಯನ್ನು ಮಂಚದ ಮೇಲೆ ತಳ್ಳಿ ಮಗಳ ಮುಂದೆಯೇ ತನ್ನ ಬಳಿಯಿದ್ದ ಚಾಕುವಿನಿಂದ ಕತ್ತು ಕತ್ತರಿಸಿ ರುಂಡ ಮುಂಡ ಬೇರ್ಪಡಿಸಿ ಪರಾರಿಯಾಗಿದ್ದ. ಆದರೆ ಪತ್ನಿ ಲಕ್ಷ್ಮೀದೇವಿ ಯಾರೊಂದಿಗೂ ಅನೈತಿಕ ಸಂಬಂಧ ಹೊಂದಿರಲಿಲ್ಲ.

ಗಂಡನೊಂದಿಗೆ ಎಂದಿಗೂ ಜಗಳವಾಡಿರಲಿಲ್ಲ. 2010 ಸುಪ್ರೀಂಕೋರ್ಟ್ ನ ತೀರ್ಪಿನ ಅನ್ವಯ ಅಮಾನುಷವಾಗಿ ಮಹಿಳೆಯ ಬರ್ಬರ ಕೊಲೆ ಮತ್ತು ಈ ಹತ್ಯೆಯನ್ನು ವಿಶೇಷ ಪ್ರಕರಣವೆಂದು ಭಾವಿಸಿ ಮಗಳು ನೀಡಿದ ಸಾಕ್ಷಿಯ ಮೇರೆಗೆ ಆರೋಪಿಗೆ ಮರಣ ದಂಡನೆ ಹಾಗೂ ದಂಡ ವಿಧಿಸಲಾಗಿದೆ.

ಸಿಪಿಐ ಶೇಷಾದ್ರಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಸರಕಾರಿ ಅಭಿಯೋಜಕರಾಗಿ ಜಿ.ಟಿ.ರಂಗಪ್ಪ ವಾದ ಮಂಡಿಸಿದ್ದರು.

# ಹೃದಯಾಘಾತ: ಬ್ಯಾಂಕ್ ವ್ಯವಸ್ಥಾಪಕ ನಿಧನ

**ಕೊರಟಗೆರೆ**

ವ್ಯವಸ್ಥಾಪಕರೊರ್ವ ಅನಿವಾರ್ಯ ಕಾರಣದಿಂದ ಒಂದು ದಿನ ರಜೆ ಹೋದ ನಿಮಿತ್ತ ಮತ್ತೋರ್ವ ವ್ಯವಸ್ಥಾಪಕ ಕಾರ್ಯನಿರ್ವಹಿಸಲು ಬ್ಯಾಂಕ್‌ಗೆ ಕಾಲಿಡುವ ಮುನ್ನವೇ ತೀವ್ರ ಹೃದಯಘಾತದಿಂದ ಬ್ಯಾಂಕ್‌ನಲ್ಲಿಯೇ ಕುಸಿದು ಬಿದ್ದು, ಕೊನೆ ಉಸಿರೆಳೆದ ಘಟನೆ ತಾಲ್ಲೂಕಿನ ಅಕ್ಕಿರಾಂಪುರ ಗ್ರಾಮದ ಕಲ್ಪತರು ಗ್ರಾಮೀಣ ಬ್ಯಾಂಕ್‌ನಲ್ಲಿ ಮಂಗಳವಾರ ಜರುಗಿದೆ.

ಕೊರಟಗೆರೆ ತಾಲ್ಲೂಕಿನ ಹೊಳವನಹಳ್ಳಿ ಹೋಬಳಿ ಅಕ್ಕಿರಾಂಪುರ ಗ್ರಾಮದಲ್ಲಿರುವ ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕಿನಲ್ಲಿ ಉಪ ವ್ಯವಸ್ಥಾಪಕ ಅನಂತ್‌ರಾಮ್ ವೈಯಕ್ತಿಕ ಕಾರ್ಯ ನಿಮಿತ್ತ ರಜೆ ಹೋದ ಕಾರಣ ಒಂದು ದಿನದ ಮಟ್ಟಿಗೆ ಕಾರ್ಯನಿರ್ವಹಿಸಲು ಮಂಗಳವಾರದಂದು ರಾಜೀವಲೋಚನ ಬ್ಯಾಂಕಿಗೆ ಧಾವಿಸಿ ಬ್ಯಾಂಕಿನ ಬಾಗಿಲು ದಾಟುತ್ತಿರುವ ಸಂದರ್ಭದಲ್ಲಿಯೇ ಎದೆನೋವು »» 10ನೇ ಪುಟಕ್ಕೆ

# ಆನ್‌ಲೈನ್ ಔಷಧ ವ್ಯಾಪಾರ ನಿಷೇಧಕ್ಕೆ ಆಗ್ರಹಿಸಿ ತುಮಕೂರು ನಗರಾದ್ಯಂತ ಔಷಧಿ ಅಂಗಡಿ ಬಂದ್

**ತುಮಕೂರು**

ಆನ್‌ಲೈನ್ ಮೂಲಕ ನಡೆಯುತ್ತಿರುವ ಔಷಧ ವ್ಯಾಪಾರವನ್ನು ನಿಷೇಧಿಸಬೇಕೆಂದು ಕೇಂದ್ರ ಸರ್ಕಾರವನ್ನು ಆಗ್ರಹಿಸಿ ರಾಷ್ಟ್ರಾದ್ಯಂತ ನೀಡಲಾಗಿದ್ದ ಕರೆಯಂತೆ ಮಂಗಳವಾರ ತುಮಕೂರು ನಗರಾದ್ಯಂತ ಔಷಧ ಮಾರಾಟ ಮಳಿಗೆಗಳು ಸಂಪೂರ್ಣವಾಗಿ ಬಂದ ಆಚರಿಸಿದವು.

ಆನ್‌ಲೈನ್ ಮೂಲಕ ಔಷಧ ಮಾರಾಟ ಆಗಬಾರದು. ಆನ್‌ಲೈನ್ ಮೂಲಕ ಯಾವುದೇ ಅಡೆತಡೆಗಳಿಲ್ಲದೆ ಮಾದಕ ಹಾಗೂ ಪ್ರತಿಬಂಧಕ ವಸ್ತುಗಳ ಮಾರಾಟದಿಂದ ಯುವ ಪೀಳಿಗೆಯ ಮೇಲೆ ಆಗುತ್ತಿರುವ ದುಷ್ಪರಿಣಾಮಗಳನ್ನು ತಡೆಗಟ್ಟಬೇಕು. ಕಳಪೆ ಗುಣಮಟ್ಟದ ಔಷಧ ಬಳಕೆ ಹಾಗೂ ಬಳಕೆ ರೀತಿಯ ಮಾಹಿತಿ ಕೊರತೆಯಿಂದ ರೋಗಿಗಳ ಮೇಲೆ ಉಂಟಾಗುತ್ತಿರುವ ಕೆಟ್ಟ ಪರಿಣಾಮಗಳನ್ನು ನಿಯಂತ್ರಿಸಬೇಕು. ಸುಮಾರು 8.5 ಲಕ್ಷಕ್ಕೂ ಅಧಿಕ ಔಷಧ ವ್ಯಾಪಾರಸ್ಥರು ಇದೇ ಉದ್ದಿಮೆಯನ್ನು ನಂಬಿದ್ದು, ಸುಮಾರು 50 ಲಕ್ಷಕ್ಕೂ ಹೆಚ್ಚಿನ ನೌಕರರು ಮತ್ತು ಅವರ ಕುಟುಂಬಸ್ಥರು ಉಳಿಯುವಂತಾಗಬೇಕು. ಪರವಾನಗಿಯ ನವೀಕರಣದಲ್ಲಿರುವ ಗೊಂದಲಗಳನ್ನು ನೀಗಿಸಬೇಕು ಎಂಬ ಪ್ರಮುಖ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಈ ಬಂದ್ ನಡೆಯಿತು.

ತುಮಕೂರು ನಗರದಲ್ಲಿರುವ 300 ಔಷಧ ಮಳಿಗೆಗಳು ಬಂದ್ ಆಗಿದ್ದವು. ಆದರೆ ಸಾರ್ವಜನಿಕ ಹಿತದೃಷ್ಟಿಯಿಂದ ಜಿಲ್ಲಾ ಆಸ್ಪತ್ರೆ ಮತ್ತು ಖಾಸಗಿ ಆಸ್ಪತ್ರೆ ಆವರಣದ ಔಷಧ ಮಳಿಗೆಗಳು ಎಂದಿನಂತೆ ತೆರೆದಿದ್ದವು.




**ಜಿಲ್ಲಾದ್ಯಂತ ಯಶಸ್ವಿ ಬಂದ್:** ನಗರದ ಟೌನ್ ಹಾಲ್ ವೃತ್ತದಲ್ಲಿ ಮಾಧ್ಯಮ ಪ್ರತಿನಿಧಿಗಳೊಡನೆ ಮಾತನಾಡಿದ ಔಷಧ ವ್ಯಾಪಾರಿಗಳ ಸಂಘದ ಕಾರ್ಯದರ್ಶಿ ಪಂಡಿತ್ ಜವಾಹರ್ ಅವರು, ಜಿಲ್ಲಾದ್ಯಂತ ಬಂದ್ ಯಶಸ್ವಿಯಾಗಿದೆ ಎಂದು ಹೇಳಿದರು.

ಆನ್‌ಲೈನ್ ಮೂಲಕ ಔಷಧ ವ್ಯಾಪಾರ ಆಗಬಾರದೆಂಬುದು ನಮ್ಮ ಪ್ರಮುಖ ಬೇಡಿಕೆ. ತುಮಕೂರು ನಗರವೊಂದರಲ್ಲೇ ತಿಂಗಳಿಗೆ ಆನ್‌ಲೈನ್ ಮೂಲಕ ಸುಮಾರು 2 ಕೋಟಿ ರೂ. ಮೊತ್ತದಷ್ಟು ಔಷಧ ವಹಿವಾಟು ಆಗುವುದೆಂದು ಅಂದಾಜಿಸಿದ್ದು, ಉಳಿದನ್ನು ಊಹಿಸಬಹುದಾಗಿದೆ ಎಂದರು.

ಔಷಧ ವ್ಯಾಪಾರಿಗಳ ಸಂಘದ ಅಧ್ಯಕ್ಷ ಎನ್.ಎಸ್.ಅನಂತ ಮತ್ತು ಕಾರ್ಯದರ್ಶಿ ಪಂಡಿತ್ ಜವಾಹರ್ ಮತ್ತಿತರ ಪದಾಧಿಕಾರಿಗಳ ನೇತೃತ್ವದಲ್ಲಿ ತುಮಕೂರು ನಗರದಲ್ಲಿ ಔಷಧ ಮಳಿಗೆಗಳ ಬಂದ್ ನಡೆಯಿತು.

# ಸಣ್ಣ ಪುಟ್ಟ ತಕರಾರಿಗೂ ವರ್ಷಾನುಗಟ್ಟಲೆ ಕಾಯಬೇಕಾದ ಪರಿಸ್ಥಿತಿ ತಹಸೀಲ್ದಾರ್ ನ್ಯಾಯಾಲಯಗಳಲ್ಲಿ 2689 ಪ್ರಕರಣಗಳು ಬಾಕಿ..!

♦ಭೂಷಣ್ ಮಿಡಿಗೇಶಿ
**ತುಮಕೂರು**

ಗುಡಿಬಂಡೆಯ ವೃದ್ಧೆಯೊಬ್ಬಳು ಇತ್ತೀಚೆಗಷ್ಟೇ ನವದೆಹಲಿಯವರೆಗೂ ಹೋಗಿ ಕರುನಾಡಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಭೇಟಿ ಮಾಡಿ 30 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ತನ್ನ ಪಾಲಿನ ಭೂಮಿಯ ಬಗ್ಗೆ ದೂರು ನೀಡಿ ಬಗೆಹರಿಸಿಕೊಂಡ ಪರಿಸ್ಥಿತಿಯ ಬಗ್ಗೆ ವರದಿಗಳು ಬಂದಿವೆ..ಇಂತಹ ಎಷ್ಟೋ ಪ್ರಕರಣಗಳು ಬೆಳಕಿಗೆ ಬಾರದೆ ನ್ಯಾಯಾಲಯಗಳ ಮೆಟ್ಟಿಲು ಹತ್ತಿ, ಭೂಮಿಗಳೂ ಕೂಡಾ ಅನಾಥವಾಗಿ ಹೋಗುತ್ತವೆ.ಸತ್ತವರ ಹೆಸರಿನಲ್ಲಿರುವ ಭೂಮಿಯನ್ನು ಇದ್ದವರ ಹೆಸರಿಗೆ ವರ್ಗಾವಣೆ ಮಾಡಲೂ ಕೂಡಾ ಸಾಕಷ್ಟು ಸತಾಯಿಸುವ ನಿದರ್ಶನಗಳು ಕಂಡುಬರುತ್ತವೆ. ಕಂದಾಯ ಇಲಾಖೆಯ ಧೋರಣೆ ಒಮ್ಮೊಮ್ಮೆ ಸತ್ತವರ ಜೊತೆಯಲ್ಲಿ, ಇದ್ದವರು ಸಾಯುವವರೆಗೂ ಖಾತೆ ಬದಲಾವಣೆಗಳಾಗದೆ ಇರುವಂತಹ ಉದಾಹರಣೆಗಳೂ ಇವೆ. ಅರಿಯದೆಯೋ ಅಥವಾ ಅರಿತೋ ಮಾಡಿಕೊಳ್ಳುವ ಕೆಲ ಪ್ರಮಾದಗಳಿಂದಾಗಿ ಕೆಲವೊಮ್ಮೆ ಇದಕ್ಕೆಂದೇ ನ್ಯಾಯಾಲಯದ ಮೆಟ್ಟಿಲೇರುವ ಪರಿಸ್ಥಿತಿಗೆ ಭೂಮಿಯ ಒಡೆಯನನ್ನೂ ಮತ್ತು ತಕರಾರು ಹಾಕುವವರನ್ನೂ ತಂದು ನಿಲ್ಲಿಸುತ್ತದೆ.

**ತಹಸೀಲ್ದಾರರ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ವಿವರ**

| ತಾಲ್ಲೂಕು | ವಿಚಾರಣೆಗೆ ಬಾಕಿ |
|---|---|
| ತುಮಕೂರು | 470 |
| ಗುಬ್ಬಿ | 124 |
| ಕುಣಿಗಲ್ | 58 |
| ತಿಪಟೂರು | 238 |
| ತುರುವೇಕೆರೆ | 48 |
| ಚಿ.ನಾ.ಹಳ್ಳಿ | 207 |
| ಮಧುಗಿರಿ | 524 |
| ಕೊರಟಗೆರೆ | 103 |
| ಶಿರಾ | 508 |
| ಪಾವಗಡ | 409 |
| ಒಟ್ಟು | 2689 |

ಸಾವಿಗೀಡಾದ ಭೂಮಿಯ ಒಡೆಯನ ಹೆಸರಿನಲ್ಲಿರುವ ಜಮೀನಿನ ಖಾತೆ ಬದಲಾವಣೆಗೆ 30 ದಿನಗಳ ಕಾಲಾವಕಾಶವನ್ನು ನೀಡಿ, ಆಕ್ಷೇಪಣೆಗಳೇನಾದರೂ ಇದ್ದರೆ ಅದಕ್ಕೂ ಕಾಲಾವಕಾಶವನ್ನು ನೀಡಿ, ಸಾರ್ವಜನಿಕಸ್ಥಳಗಳಲ್ಲಿಮತ್ತು ಚಾವಡಿಗಳಲ್ಲಿ



ಆಕ್ಷೇಪಣೆಗಳೇನಾದರೂ ಇದ್ದರೆ ಸಂಪರ್ಕಿಸುವಂತೆ ಪ್ರಕಟಣೆಯನ್ನು ಹಾಕಿ, ಖಾತೆ ಬದಲಾವಣೆಯನ್ನು ಮಾಡಲಾಗುತ್ತದೆ. ಆದರೂ ಇಂತಹ ಪವತಿ ಖಾತೆಗಳೂ ಕೂಡಾ ವಿಳಂಬವಾಗಿ ವಂಶವೃಕ್ಷಗಳಲ್ಲಿ ಆಗುವ ಪ್ರಮಾದಗಳು, ಇನ್ಯಾರೋ ರಕ್ತ ಸಂಬಂಧಿಗಳು ಜಮೀನಿನ ಒಡೆತನದಲ್ಲಿ ನಮ್ಮದೂ ಪಾಲಿದೆ ಎಂಬ ದೂರುಗಳ ಮೇಲೆ ತಹಸೀಲ್ದಾರರ ನ್ಯಾಯಾಲಯಕ್ಕೆ ಪ್ರಕರಣಗಳು ದಾಖಲಾಗುತ್ತವೆ. ಭೂಮಿಗಳನ್ನು ಕೊಳ್ಳುವಾಗ, ಮಾರುವಾಗ ಉದ್ಭವಿಸಬಹುದಾದ, ತಕರಾರುಗಳು, ನೋಂದಣಿ ಸಂಬಂಧಿತ ವಿವಾದಗಳು ಕೂಡಾ ತಹಸೀಲ್ದಾರರ ನ್ಯಾಯಾಲಯದಲ್ಲಿ ದಾಖಲಾಗಿ ವರ್ಷಾನುಗಟ್ಟಲೆ ಸತಾಯಿಸುತ್ತವೆ.

ವರ್ಷಾನುಗಟ್ಟಲೆ ಕನ್ನಡಿಯೊಳಗಿನ ಗಂಟಿನಂತೆ ಇತ್ತ ಅನುಭವಿಸಲೂ ಆಗದೆ, ಅತ್ತ ಬಿಟ್ಟುಕೊಡಲೂ ಆಗದೆ ದ್ವೇಷ ವೈಷಮ್ಯಗಳ ನಡುವೆ ಬದುಕು ಮುಗಿಸುವ ವಿಷಮ ಪರಿಸ್ಥಿತಿ ಬಂದೊದಗುತ್ತದೆ. ಈ ನಿಟ್ಟಿನಲ್ಲಿ ಕಂದಾಯ ಇಲಾಖೆಗೆ ಸಂಭಂಧಿಸಿದಂತೆ ತುಮಕೂರು ಜಿಲ್ಲೆಯಲ್ಲಿನ ಹತ್ತು ತಾಲ್ಲೂಕುಗಳ ತಹಸೀಲ್ದಾರರ ನ್ಯಾಯಾಲಯಗಳಲ್ಲಿ ಬಾಕಿ ಇರುವ ಭೂಮಿಗೆ ಸಂಬಂಧಿಸಿದ ಪ್ರಕರಣಗಳ ಕುರಿತಂತೆ ಬೆಳಕು ಚೆಲ್ಲುವ ಈ ಪ್ರಯತ್ನದಿಂದ ಕನಿಷ್ಠಪಕ್ಷ ಹಳೆಯದಾಗಿರುವ ಪ್ರಕರಣಗಳ ವಿಲೇವಾರಿಯಾದರೂ ಶೀಘ್ರವಾಗಿ ಇತ್ಯರ್ಥವಾಗಬಹುದೆನ್ನುವ ಆಶಯ ಪತ್ರಿಕೆಯದು.

**ತುರುವೇಕೆರೆಯಲ್ಲಿ ಅತಿ ಕಡಿಮೆ ಭೂ ವಿವಾದದ ಪ್ರಕರಣಗಳು..!!!**

ಇಡೀ ಜಿಲ್ಲೆಯಲ್ಲಿರುವ ತಹಸೀಲ್ದಾರರ ನ್ಯಾಯಾಲಯಗಳ ಪ್ರಕರಣಗಳನ್ನು ಗಮನಿ ಸಿದರೆ ತುರುವೇಕೆರೆ ತಾಲ್ಲೂಕಿನಲ್ಲಿ ಮಾತ್ರ ಅತ್ಯಂತ ಕಡಿಮೆ ಪ್ರಕರಣಗಳು ಅಂದರೆ 48 ಮಾತ್ರ ಇತ್ಯರ್ಥವಾಗದೆ ಉಳಿದಿರುವುದು ಕಂಡುಬಂದಿದೆ. ಕಳೆದ ಮೂರು ತಿಂಗಳ ಅವಧಿಯಲ್ಲಿ ಮೂರು ಅರ್ಜಿಗಳು ನ್ಯಾಯಾ ಲಯಕ್ಕೆ ಸಲ್ಲಿಕೆಯಾಗಿವೆ. ಇವುಗಳನ್ನು ಹೊರತುಪಡಿಸಿದರೆ, ವಿಚಾರಣೆಗೆ ಬಾಕಿ ಇರುವ 1 ವರ್ಷದೊಳಗಿನ ಪ್ರಕರಣಗಳ ಸಂಖ್ಯೆ 41 ಇದೆ.ಎರಡು ವರ್ಷ ಮತ್ತು ಅದಕ್ಕಿಂತಲೂ ಮೇಲ್ಪಟ್ಟ ಅವಧಿಯ ವಿಚಾರಣೆಗಳು ಮುಗಿಯದ ಪ್ರಕರಣಗಳ ಸಂಖ್ಯೆ 4.ಈ ನಾಲ್ಕು ಪ್ರಕರಣಗಲೂ ನೆನೆಗುದಿಗೆ ಬಿದ್ದಿದ್ದು ಯಾವ ಕಾಲದಲ್ಲಿ ವಿಲೇವಾರಿಯಾಗುತ್ತವೆ ಎಂಬುದು ತಿಳಿಯದು.ಕುಣಿಗಲ್ ತಾಲ್ಲೂಕಿನಲ್ಲಿಯೂ 1 ವರ್ಷದ ಒಳಗಿನ 3 ಅರ್ಜಿಗಳನ್ನು ಹೊರತುಪಡಿಸಿದರೆ ಇತರೆ ಎಲ್ಲಾ ಅರ್ಜಿಗಳೂ »» 6ನೇ ಪುಟಕ್ಕೆ

# ಸಿಇಟಿ:ವಿ.ಎಲ್.ಹೇಮಂತ್ ರಾಜ್ಯಕ್ಕೆ 91ನೇ ರ್‍ಯಾಂಕ್

**ತುಮಕೂರು**

ತುಮಕೂರಿನ ವಿದ್ಯಾನಿಕೇತನ ಪಿ.ಯು.ಕಾಲೇಜಿನ ವಿದ್ಯಾರ್ಥಿ ವಿ.ಎಲ್.ಹೇಮಂತ್ ಪ್ರಸಕ್ತ ವರ್ಷದ ಸಿಇಟಿಯಲ್ಲಿ ಇಂಜಿನಿಯರಿಂಗ್ ವಿಭಾಗದಲ್ಲಿ 91ನೇ ರ್‍ಯಾಂಕ್‌ಗಳಿಸಿದ್ದಾನೆ. ಶಿಕ್ಷಕರಾಗಿರುವ ತಂದೆ ಲಕ್ಷ್ಮೀಶಯ್ಯ, ತಾಯಿ ರಾಧಾಮಣಿ ದಂಪತಿಗಳ ಮಗನಾದ ಹೇಮಂತ್ ಈ ಸಾಧನೆ ಮಾಡಿದ್ದಾನೆ. ಜೊತೆಗೆ ಬಿಎಸ್ಸಿ ಅಗ್ರಿಕಲ್ಚರ್‌ನಲ್ಲಿ 12ನೇ, ವೆಟರ್ನರಿಯಲ್ಲಿ 21ನೇ, ಐಎಸ್‌ಎಂಎಚ್‌ನಲ್ಲಿ 43ನೇ ರ್‍ಯಾಂಕ್ ಗಳಿಸಿದ್ದಾನೆ. ಈತ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹಿಂದಿ-95, ಇಂಗ್ಲಿಷ್-86, ಭೌತಶಾಸ್ತ್ರ-99, ರಸಾಯನಶಾಸ್ತ್ರ-99, ಗಣಿತ-100, ಜೀವಶಾಸ್ತ್ರ-94 ಒಟ್ಟು 573 ಅಂಕಗಳನ್ನು ಗಳಿಸಿದ್ದು ಸಿಇಟಿ ಇಂಜಿನಿಯರಿಂಗ್‌ನಲ್ಲಿ 91ನೇ ರ್‍ಯಾಂಕ್ ಗಳಿಸಿದ್ದಾನೆ. ಸಿಇಟಿ ಭೌತ ಶಾಸ್ತ್ರದಲ್ಲಿ 56, ರಸಾಯನ ಶಾಸ್ತ್ರದಲ್ಲಿ 55, ಗಣಿತದಲ್ಲಿ 55, ಜೀವಶಾಸ್ತ್ರದಲ್ಲಿ 55 ಅಂಕಗಳನ್ನು ಪಡೆದಿದ್ದಾನೆ. ಪಿಯುಸಿ ಯಲ್ಲಿ ದಿನಕ್ಕೆ 5-6 ಗಂಟೆ ಓದುತ್ತಿದ್ದೆ, ಸಿಇಟಿಗೆ 8-10 ಗಂಟೆ ಓದುತ್ತಿದ್ದೆ. ಯಾವುದೇ ಟ್ಯೂಷನ್‌ಗೆ ಹೋಗದೆ ಮನೆ ಯಲ್ಲಿ ಸೆಲ್ಫ್ ಸ್ಟಡಿಯನ್ನು ಶ್ರದ್ದೆಯಿಂದ ಮಾಡಿದೆ. ಸಿಇಟಿಯಲ್ಲಿ ಬರುವ ಪ್ರಾಬ್ಲಂಗಳನ್ನು ಹೆಚ್ಚು ವರ್ಕ್ ಮಾಡುವುದರ ಮೂಲಕ ಉತ್ತರ ಕಂಡುಕೊಳ್ಳುತ್ತಿದ್ದೆ, ಜೊತೆಗೆ ಕಾಲೇಜಿನ ಉಪನ್ಯಾಸಕರ ಬಳಿ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುತ್ತಿದ್ದೆ, ಹೆಚ್ಚು ಸಿಇಟಿ ಪುಸ್ತಕಗಳನ್ನು ಓದಿದ್ದೇ ಈ ರ್‍ಯಾಂಕ್‌ಗಳಿಸಲು ಸಾಧ್ಯವಾಯಿತು ಎನ್ನುತ್ತಾನೆ ಹೇಮಂತ್. ನನ್ನ ಅಕ್ಕ ಡಾಕ್ಟರ್ ಆಗಿ ಸೇವೆ ಸಲ್ಲಿಸುತ್ತಿದ್ದು ನಾನು ಡಾಕ್ಟರ್ ಆಗುವ ಕನಸನ್ನು ಹೊತ್ತಿದ್ದೇನೆ ಎಂಬ ಆಸೆಯನ್ನು ವ್ಯಕ್ತಪಡಿಸುತ್ತಾನೆ.



> **ಮನೆಯಲ್ಲಿ ಸೆಲ್ಫ್ ಸ್ಟಡಿಯನ್ನು ಶ್ರದ್ದೆಯಿಂದ ಮಾಡಿದೆ. ಸಿಇಟಿಯಲ್ಲಿ ಬರುವ ಪ್ರಾಬ್ಲಂಗಳನ್ನು ಹೆಚ್ಚು ವರ್ಕ್ ಮಾಡುವುದರ ಮೂಲಕ ಉತ್ತರ ಕಂಡುಕೊಳ್ಳುತ್ತಿದ್ದೆ, ಜೊತೆಗೆ ಕಾಲೇಜಿನ ಉಪನ್ಯಾಸಕರ ಬಳಿ ಅನುಮಾನದ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುತ್ತಿದ್ದೆ ಎನ್ನುತ್ತಾನೆ ಹೇಮಂತ್.**

30-05-2017.indd 2 5/30/2017 11:47:46 PM